ಸರಿ ದುಡ್ಡು ಖರ್ಚು ಮಾಡಿ ಕೆಲಸ ಮಾಡಿಲ್ಲದಿದ್ದಲ್ಲಿ ಅದಕ್ಕೆ ಕಾರಣರಾದ ಗುತ್ತಿಗೆದಾರರನ್ನು ಮತ್ತು ಅಧಿಕಾರಿಗಳನ್ನು ಸರ್ಕಾರ ಸುಮ್ಮನೆ ಬಿಡುವುದಿಲ್ಲ. ಈಗಾಗಲೇ ರಾಜ್ಯದಲ್ಲಿ ಈ ದಿಸೆಯಲ್ಲಿ ನಾವು ಕ್ರಮ ಕೈಗೊಳ್ಳಲು ಪ್ರಾರಂಭ ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಕೂಡ ಸರಿಯಾಗಿ ಕೆಲಸ ಮಾಬೇಕೆಂಬ ಆದೇಶವನ್ನು ನಾವು ಈಗಾಗಲೇ ರಾಜ್ಯಾದ್ಯಂತ ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಳಪೆ ಕಾಮಗಾರಿಗಳಾಗಿವೆ ಎಂದು ನಿಮ್ಮ ಅನಿಸಿಕೆಗಳಿವೆಯೋ ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಸ್ತೆಗಳ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದು ಹೇಳಿದರು. ಆದರೆ ಈ ಹೊಂಡಗಳು ಏಕೆ ಬೀಳುತ್ತಿವೆ ಎಂಬುದು ಮೂಲಭೂತವಾದಂತಹ ಪ್ರಶ್ನೆಯಾಗಿದೆ. ಗ್ಯಾರಂಟಿ ಪೀರಿಯಡ್‌ನಲ್ಲಿ ಕ್ವಾಲಿಟಿ ವರ್ಕ್‌ಗೆ ಅಕೌಂಟಬಲಿಟಿಯಾಗುವಂತಹ ಕ್ಲಾಜ್ ಅನ್ನು ಟೆಂಡರ್ ಸಮಯದಲ್ಲಿ ಮಾನ್ಯ ಮಂತ್ರಿಗಳು ಇನ್‌ಸಿಸ್ಟ್ ಮಾಡುತ್ತಿಲ್ಲವೇ? ಇನ್‌ಸಿಸ್ಟ್ ಮಾಡುತ್ತಿಲ್ಲವೆನ್ನುವುದಾದರೆ ಅದನ್ನು ಏಕೆ ಮಾಡುತ್ತಿಲ್ಲ? ಕನಿಷ್ಟ ಪಕ್ಷ ನ್ಯಾಷನಲ್ ಹೈವೇ ಸ್ಟ್ಯಾಂಡರ್ಡ್‌ನಲ್ಲಿ ಪಿ.ಡಬ್ಲ್ಯೂ.ಡಿ. ರಸ್ತೆಗಳು ಆಗುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಎಲ್ಲಾ ಕಡೆಗಳಲ್ಲಿ ರಸ್ತೆಗಳ ಗುಣಮಟ್ಟವನ್ನು ಕಾಪಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಶೇ.76ರಷ್ಟು ಗುಂಡಿ ಮುಚ್ಚುವ ಕೆಲಸವನ್ನು ನಾವು ಪೂರ್ಣಗೊಳಿಸಿದ್ದೇವೆ. ಅದನ್ನೂ ಕೂಡ ಸರಿಯಾದ ರೀತಿಯಲ್ಲಿ ಕ್ರಮಬದ್ಧವಾಗಿ ಮಾಡಬೇಕೆಂಬ ಆದೇಶವನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ನ್ಯಾಷನಲ್ ಹೈವೇ ಅನ್ನು ಈ ದಿಸೆಯಲ್ಲಿ ನಾವು ಮಾದರಿಯಾಗಿ ತೆಗೆದುಕೊಳ್ಳುತ್ತೇವೆ.

**ಶಿವಮೊಗ್ಗ ನಗರದಲ್ಲಿರುವ ಶಿವಪ್ಪನಾಯಕರ ಅರಮನೆ ಅಭಿವೃದ್ಧಿ**

154 (1702) ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ. ?

ಅ) ಶಿವಮೊಗ್ಗ ನಗರದಲ್ಲಿರುವ ಶಿವಪ್ಪನಾಯಕರ ಅರಮನೆ ಅಭಿವೃದ್ಧಿಗೆ ಖರ್ಚು ಮಾಡಲಾದ ಹಣ ಎಷ್ಟು?

ಆ) ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಉಡುತಡಿ ಗ್ರಾಮವು ಅಕ್ಕಮಹಾದೇವಿಯ ಜನ್ಮ ಸ್ಥಳಾಗಿರುವುದರಿಂದ ಸದರಿ ಗ್ರಾಮವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು?

ಇ) ಜೋಗ್ ಜಲಪಾತ ವೀಕ್ಷಿಸಲು ಸರ್ಕಾರ ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡುವುದೆ? ೇ

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು)

ಅ) ಖರ್ಚು ಮಾಡಲಾದ ಹಣ ರೂ. 38.02 ಲಕ್ಷಗಳು

ಆ) ಉಡುತಡಿ ಗ್ರಾಮದಲ್ಲಿ ಅಕ್ಕ ಮಹಾದೇವಿಯ ಜನ್ಮ ಸ್ಥಳ ಪರಿಶೀಲನೆಯ ನಂತರ ಕ್ರಮ ಕೈಗೊಳ್ಳಲಾಗುವುದು.

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಜೋಗ್ ಜಲಪಾತಕ್ಕೆ ಜುಲೈ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಪ್ಯಾಕೇಜ್ ಪ್ರವಾಸವನ್ನು ಏರ್ಪಡಿಸುತ್ತದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಜೋಗ್ ಜಲಪಾತಕ್ಕೆ ಜುಲೈ ತಿಂಗಳಿನಿಂದ ಅಕ್ಟೋಬರ್ ತಿಂಗಳಿನವರೆಗೆ ಪ್ಯಾಕೇಜ್ ಪ್ರವಾಸವನ್ನು ಏರ್ಪಡಿಸುತ್ತದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ನಾನು ಶಿವಮೊಗ್ಗ ಕ್ಷೇತ್ರದಿಂದ ಬಂದವನಾಗಿದ್ದೇನೆ. ಜೋಗ್ ಜಲಪಾತ ಇಡೀ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ. ಆದರೆ ಅಲ್ಲಿಗೆ ಹೋಗಿ ಬರಲಿಕ್ಕೆ ಬಹಳ ತೊಂದರೆ ಇದೆ. ಪ್ರತಿ ದಿವಸ ಅಲ್ಲಿಗೆ ಬೆಳಿಗ್ಗೆ ಹೋಗಿ ಸಂಜೆ ವಾಪಸ್ ಬರತಕ್ಕ ರೀತಿಯಲ್ಲಿ ಬಸ್ಸಿನ ವ್ಯವಸ್ಥೆ ಮಾಡಿದರೆ ಬಹಳಷ್ಟು ಜನ ಪ್ರವಾಸಿಗಳಿಗೆ ಅಲ್ಲಿಗೆ ಭೇಟಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದರ ಜೊತೆಗೆ ಆ ಭಾಗವನ್ನು ಮೈಸೂರಿನ ಕೆ.ಆರ್.ಎಸ್. ಮಾದರಿಯಲ್ಲಿ ಅಭಿವೃದ್ಧಿಪಡಿಸಿದರೆ ಪ್ರವಾಸೋದ್ಯಮಕ್ಕೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಆ ರೀತಿ ಮಾಡಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಜೋಗ್ ಡೆವಲಪ್‌ಮೆಂಟ್ ಅಥಾರಿಟಿ ಎಂಬ ಪ್ರಾಧಿಕಾರವೊಂದನ್ನು ಸರ್ಕಾರದ ವತಿಯಿಂದ ಸ್ಥಾಪಿಸುತ್ತಿದ್ದೇವೆ. ಮಾನ್ಯ ಸದಸ್ಯರು ಮೈಸೂರಿನ ಬೃಂದಾವನ್ ಗಾರ್ಡನ್ ರೀತಿಯಲ್ಲಿ ಅಲ್ಲಿ ಅಭಿವೃದ್ಧಿ ಪಡಿಸಬೇಕೆಂದು ಸಲಹೆ ಮಾಡಿದ್ದಾರೆ . ಆ ಬಗ್ಗೆ ಈಗಾಗಲೇ ನಾನು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಕಾಗೋಡು ತಿಮ್ಮಪ್ಪನವರು ಆ ಜಾಗಕ್ಕೆ ಭೇಟಿ ನೀಡಿ ಅದನ್ನು ಇನ್ಸ್‌ಪೆಕ್ಟ್ ಮಾಡಿ ಆ ದಿಸೆಯಲ್ಲಿ ಕ್ರಮ ತೆಗೆದುಕೊಂಡಿದ್ದೇನೆ. ಅಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಸೇರಿದ ಜಾಗವೊಂದಿದೆ. ಅಲ್ಲಿ ಮೈಸೂರಿನ ಬೃಂದಾವನ ಗಾರ್ಡನ್ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂದು ಯೋಚಿಸಿದ್ದೇವೆ. ಇದನ್ನೆಲ್ಲಾ ಅಲ್ಲಿ ಕೋ-ಆರ್ಡಿನೇಟ್ ಮಾಡುವ ಸಲುವಾಗಿ ಜೋಗ್ ಡೆವಲಪ್‌ಮೆಂಟ್ ಅಥಾರಿಟಿಯನ್ನು ಅಲ್ಲಿ ಸ್ಥಾಪಿಸಿದ್ದೇವೆ. ಪ್ರತಿ ದಿವಸ ಅಲ್ಲಿಗೆ ಬಸ್ಸಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಎಲ್ಲಿಂದ ಎಲ್ಲಿಯವರೆಗೆ ಬಸ್ಸಿನ ಸೌಲಭ್ಯ ಬೇಕೆಂಬುದನ್ನು ಅವರು ನನಗೆ ತಿಳಿಸಿದರೆ ನಾನು ಆ ಸೌಲಭ್ಯವನ್ನು ಒದಗಿಸಿಕೊಡುವ ಕೆಲಸ ಮಾಡುತ್ತೇನೆ ಎಂದು ಆಶ್ವಾಸನೆ ನೀಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಶಿವಮೊಗ್ಗದಿಂದ ಪ್ರತಿ ದಿವಸ ಜೋಗ್‌ಗೆ ಹೋಗಿ ಸಂಜೆ ಮತ್ತೆ ವಾಪಸ್ ಬರಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಬಸ್ಸಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ. ಟ್ಯಾಕ್ಸಿಯಲ್ಲಿ ಹೋಗಿ ಬರಬೇಕಾದರೆ ಬಹಳ ದುಡ್ಡು ಖರ್ಚಾಗುವುದರಿಂದ ಬಸ್ಸಿನ ಸೌಲಭ್ಯ ಒದಗಿಸಿದಲ್ಲಿ ಬಡ ಬಗ್ಗರೂ ಕೂಡ ಬೆಳಿಗ್ಗೆ ಅಥವಾ ಮಧ್ಯಾಹ್ನ ಶಿವಮೊಗ್ಗದಿಂದ ಜೋಗ್‌ಗೆ ಹೋಗಿ ಮತ್ತೆ ಸಂಜೆ ವಾಪಸ್ ಬರಲಿಕ್ಕೆ ಅನುಕೂಲವಾಗುತ್ತದೆ. ಶಿವಮೊಗ್ಗದಿಂದ ಜೋಗ್‌ಗೆ ಕೇವಲ 100 ಕಿ.ಮೀ. ದೂರವಿದೆ. ಆದ್ದರಿಂದ ಅಲ್ಲಿ ಬಸ್ಸಿನ ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೋರಿದಂತೆ ಬಸ್ಸಿನ ಏರ್ಪಾಡು ಮಾಡಿಕೊಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ನಗರದ ತುಂಗಾ ತೀರದಲ್ಲಿ 14- 15ನೇ ಶತಮಾನದ ಐತಿಹಾಸಿಕ ಭವ್ಯವಾದ ಮರದ ಅರಮನೆ ಇದೆ. ಕೆಳದಿ ಚೆನ್ನಮ್ಮಾಜ್ಜಿಯ ಇತಿಹಾಸ ಇರತಕ್ಕಂಥ ಶಿವಪ್ಪ ನಾಯಕನ ಅರಮನೆ ಕೂಡ ಅಲ್ಲಿದೆ. ಆ ಅರಮನೆಯ ಮೇಲ್ಛಾವಣಿ ಈಗಾಗಲೇ ಗೆದ್ದಲೂ ಹಿಡಿದಿರತಕ್ಕಂಥ ಸ್ಥಿತಿಗೆ ಬಂದಿದೆ. ಅರಮನೆಯ ಮೇಲ್ಛಾವಣಿಗೆ ಗೆದ್ದಲು ನಿರೋಧಕ ರಾಸಾಯನಿಕವನ್ನು ಸಿಂಪಡಿಸಿ ಅದಕ್ಕೊಂದು ಹೊಸ ರೂಪವನ್ನು ನೀಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೋರುತ್ತೇನೆ. ಅದೇ ರೀತಿಯಲ್ಲಿ ಶಿವಪ್ಪ ನಾಯಕನ ಅರಮನೆಯ ಮುಂಭಾಗ ಗಜಗಾತ್ರದ ಸಾಗುವಾನಿ ಕಂಬದ ಸಾಲುಗಳೂ ಕೂಡ ಬಿಸಿಲು, ಮಳೆಯಿಂದ ಹಾಳಾಗುತ್ತಿದೆ. ಅದನ್ನೂ ಕೂಡ ರಕ್ಷಣೆ ಮಾಡಬೇಕೆಂದು ಕೋರುತ್ತಿದ್ದೇನೆ. ಶಿವಪ್ಪ ನಾಯಕನ ಅರಮನೆಯ ಒಳಗಡೆ ಬೆಳಕಿಗಾಗಿ ವಿದ್ಯುತ್ ವೈರಿಂಗ್ ಕೂಡ ಮಾಡಿರುತ್ತಾರೆ. ಒಂದು ವೇಳೆ ವಿದ್ಯುತ್ ಸರ್ಕಿಟ್ ಹಾಳಾದರೆ ಇಡೀ ಮರದ ಅರಮನೆ ಹಾಳಾಗುವುದರಿಂದ ಅದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸುಮಾರು 38 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ನಾವು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಕೆಲವೊಂದು ಕೆಲಸಗಳು ಆಗಬೇಕಾಗಿದೆ ಎಂದು ನಮ್ಮ ಗಮನ ಸೆಳೆದಿದ್ದಾರೆ. ನಾನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಜೊತೆಗೂಡಿ ಆ ಸ್ಥಳವನ್ನು ಪರಿಶೀಲನೆ ಮಾಡಿ ಅಲ್ಲಿ ಇನ್ನೂ ಏನೇನು ಕೆಲಸಗಳು ಆಗಬೇಕಾಗಿದೆಯೋ ಅವುಗಳನ್ನು ಮಾಡಿಸಿಕೊಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪ್ರತಿ ವರ್ಷ ಅಲ್ಲಿನ ಡೆವಲಪ್‌ಮೆಂಟ್‌ಗಾಗಿ ಹಣವನ್ನು ಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 135 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.